ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.
E-mail:commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ: ಪಪೂಶಿ/ಶೈಶಾ-04/ಪ.ಗ್ರ/2017-2018

ದಿನಾಂಕ:22-01-2018

## ಜ್ಞಾಪನ

ವಿಷಯ: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಬುಕ್ ಬ್ಯಾಂಕ್ ಸ್ಥಾಪಿಸಿ ಅವುಗಳಿಗೆ ಬಾಷೆ ಹಾಗೂ ಕಲಾ ವಿಷಯಗಳ ಪಠ್ಯ ಪುಸ್ತಕಗಳನ್ನು ಸರಬರಾಜು ಮಾಡಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ- ಸರ್ಕಾರಿ ಆದೇಶ ಸಂಖ್ಯೆ :ಇಡಿ/18ಯೋಸಾಕ-2018 ದಿನಾಂಕ 16/01/2018

****

## ಪ್ರಸ್ತಾವನೆ

2017-18ನೇ ಶೈಕ್ಷಣಿಕ ಸಾಲಿನಲ್ಲಿ ಎಲ್ಲಾ 1203 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಬುಕ್ ಬ್ಯಾಂಕ್‌ಗಳನ್ನು ಈಗಾಗಲೆ ಸ್ಥಾಪನೆಮಾಡಿ ವಿಜ್ಞಾನ ಮತ್ತು ವಾಣಿಜ್ಯ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಲಾಗಿದೆ.

2018-19ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾ ವಿಭಾಗದ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿ ಫಲಿತಾಂಶವನ್ನು ಉತ್ತಮಗೊಳಿಸುವ ಹಿನ್ನೆಲೆಯಲ್ಲಿ ಹಾಗೂ ಕಲಾ ವಿಭಾಗದ ವಿಷಯಗಳಿಗೆ ಪರಿಷ್ಕೃತ ಪಠ್ಯಪುಸ್ತಕಗಳನ್ನು ಅಳವಡಿಸಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಬುಕ್ ಬ್ಯಾಂಕ್‌ಗಳಿಗೆ ಕನ್ನಡ, ಇಂಗ್ಲೀಷ್, ಇತಿಹಾಸ, ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ ಪಠ್ಯ ಪುಸ್ತಕಗಳನ್ನು ರೂ 2 ಕೋಟಿ ಅನುದಾನದಲ್ಲಿ ಖರೀದಿಸಿ ವಿತರಿಸಲು ಉದ್ದೇಶಿಸಲಾಗಿದೆ.

ಮೇಲಿನಂತೆ ಖರೀದಿಸಲ್ಪಡುವ ಪರಿಷ್ಕೃತ ಪಠ್ಯಪುಸ್ತಕಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಪಠ್ಯಪುಸ್ತಕ ನಿಧಿ (Book Bank for SC/ST Students) ಯೋಜನೆಗೆ ಒಳಪಡಿಸಲು ಚಿಂತಿಸಲಾಗಿದೆ. ಈ ಯೋಜನೆಯಡಿ 10ನೇ ತರಗತಿಯಲ್ಲಿ ಅತಿಹೆಚ್ಚು ಅಂಕಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಪಠ್ಯಪುಸ್ತಕಗಳನ್ನು ನೀಡಲಾಗುವುದು. ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ ನಂತರ ಸದರಿ ಯೋಜನೆಯಡಿ ಪಡೆದ ಪುಸ್ತಕಗಳನ್ನು ಕಾಲೇಜುಗಳಿಗೆ ಹಿಂದಿರುಗಿಸುವುದು ಕಡ್ಡಾಯಗೊಳಿಸಲಾಗುವುದು. ಈ ರೀತಿ ಪಡೆದ ಪುಸ್ತಕಗಳನ್ನು ನಂತರದ ಶೈಕ್ಷಣಿಕ ವರ್ಷದಲ್ಲಿ ಮತ್ತೊಮ್ಮೆ ಅತಿಹೆಚ್ಚು ಅಂಕಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡಲಾಗುವುದು. ಈ ರೀತಿ ಒಂದು ಬಾರಿ ಖರೀದಿಸಿದ್ದ ಪಠ್ಯಪುಸ್ತಕಗಳನ್ನು 3 ಶೈಕ್ಷಣಿಕ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಉಪಯೋಗಿಸಿಕೊಳ್ಳಲಾಗುವುದು.

ಸದರಿ ಪಠ್ಯಪುಸ್ತಕಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಖರೀದಿಸಲು ಸಂಬಂದಿಸಿದ ಕಾಲೇಜುಗಳಿಗೆ ಅನುದಾನ ಹಂಚಿಕೆ

ಮಾಡಲಾಗಿದೆ. ಲೆಕ್ಕಶೀರ್ಷಿಕೆ 2202-02-108-0-01-422ಯಡಿ ಒಟ್ಟು ರೂ 4999955/- (ರೂ ನಲವತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತು ಸಾವಿರ ಒಬ್ಬೈನೂರ ಐವತ್ತೈದು ಮಾತ್ರ) ಹಾಗೂ ಲೆಕ್ಕಶೀರ್ಷಿಕೆ 2202-02-108-0-01-423ಯಡಿ ಒಟ್ಟು ರೂ 14999865/- (ರೂ ಒಂದು ಕೋಟಿ ನಲವತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತು ಸಾವಿರ ಎಂಟುನೂರ ಅರವತ್ತೈದು ಮಾತ್ರ) 31 ಜಿಲ್ಲೆಗಳ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಈ ಕೆಳಕಂಡಂತೆ ಬಿಡುಗಡೆ ಮಾಡಲು ಆದೇಶಿಸಿದೆ.

| | District | ಲೆಕ್ಕಶೀರ್ಷಿಕೆ 2202-02-108-0-01-422 (ಎಸ್‌ಸಿಪಿ) | ಲೆಕ್ಕಶೀರ್ಷಿಕೆ 2202-02-108-0-01-423 (ಟಿ.ಎಸ್.ಪಿ) | ಒಟ್ಟು ಅನುದಾನ |
|---|---|---|---|---|
| 1 | ಬೆಂಗಳೂರು-ಉತ್ತರ | 242520 | 80840 | 323360 |
| 2 | ಬೆಂಗಳೂರು-ದಕ್ಷಿಣ | 275655 | 91885 | 367540 |
| 3 | ಬೆಂಗಳೂರು-ಗ್ರಾಮಾಂತರ | 276885 | 92295 | 369180 |
| 4 | ರಾಮನಗರ | 407085 | 135695 | 542780 |
| 5 | ಬಳ್ಳಾರಿ | 580140 | 193380 | 773520 |
| 6 | ಬೆಳಗಾವಿ | 757125 | 252375 | 1009500 |
| 7 | ಬಾಗಲಕೋಟ | 478950 | 159650 | 638600 |
| 8 | ವಿಜಾಪುರ | 368295 | 122765 | 491060 |
| 9 | ಬೀದರ | 258255 | 86085 | 344340 |
| 10 | ದಾವಣಗೆರೆ | 610260 | 203420 | 813680 |
| 11 | ಚಿತ್ರದುರ್ಗ | 545160 | 181720 | 726880 |
| 12 | ಚಿಕ್ಕಮಗಳೂರು | 493950 | 164650 | 658600 |
| 13 | ಗದಗ | 280140 | 93380 | 373520 |
| 14 | ಹಾವೇರಿ | 395160 | 131720 | 526880 |
| 15 | ಧಾರವಾಡ | 256350 | 85450 | 341800 |
| 16 | ಗುಲ್ಬರ್ಗಾ | 538950 | 179650 | 718600 |
| 17 | ಯಾದಗಿರಿ | 346965 | 115655 | 462620 |
| 18 | ಹಾಸನ | 809865 | 269955 | 1079820 |
| 19 | ಚಿಕ್ಕಬಳ್ಳಾಪುರ | 316965 | 105655 | 422620 |
| 20 | ಕೋಲಾರ | 530715 | 176905 | 707620 |
| 21 | ಚಾಮರಾಜನಗರ | 317580 | 105860 | 423440 |
| 22 | ಮಂಡ್ಯ | 1093335 | 364445 | 1457780 |
| 23 | ಮೈಸೂರು | 701670 | 233890 | 935560 |
| 24 | ಉತ್ತರ ಕನ್ನಡ | 506370 | 168790 | 675160 |
| 25 | ಕೊಪ್ಪಳ | 447660 | 149220 | 596880 |
| 26 | ರಾಯಚೂರು | 401490 | 133830 | 535320 |
| 27 | ಉಡುಪಿ | 540915 | 180305 | 721220 |
| 28 | ದಕ್ಷಿಣ ಕನ್ನಡ | 453930 | 151310 | 605240 |
| 29 | ಶಿವಮೊಗ್ಗ | 680835 | 226945 | 907780 |
| 30 | ತುಮಕೂರು | 901650 | 300550 | 1202200 |
| 31 | ಕೊಡಗು | 185040 | 61680 | 246720 |
| | ಒಟ್ಟು | ರೂ 14999865/- | ರೂ4999955/- | ರೂ19999820/- |

ಆದೇಶ

2018-19ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾ ವಿಭಾಗದ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯನ್ನು ಹೆಚ್ಚಿಸಿ ಫಲಿತಾಂಶವನ್ನು ಉತ್ತಮಗೊಳಿಸುವ ಹಿನ್ನೆಲೆಯಲ್ಲಿ ಹಾಗೂ ಕಲಾ ವಿಭಾಗದ ವಿಷಯಗಳಿಗೆ ಪರಿಷ್ಕೃತ ಪಠ್ಯಪುಸ್ತಕಗಳನ್ನು ಅಳವಡಿಸಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಬುಕ್ ಬ್ಯಾಂಕ್‌ಗಳಿಗೆ ಕನ್ನಡ, ಇಂಗ್ಲೀಷ್, ಇತಿಹಾಸ, ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ ಪಠ್ಯ ಪುಸ್ತಕಗಳನ್ನು ರೂ 2 ಕೋಟಿ ಅನುದಾನದಲ್ಲಿ ಲೆಕ್ಕಶೀರ್ಷಿಕೆ 2202-02-108-0-01-422ಯಡಿ ಒಟ್ಟು ರೂ 4999955/- (ರೂ ನಲವತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತು ಸಾವಿರ ಒಬ್ಬೈನೂರ ಐವತ್ತೈದು ಮಾತ್ರ) ಹಾಗೂ ಲೆಕ್ಕಶೀರ್ಷಿಕೆ 2202-02-108-0-01-423ಯಡಿ ಒಟ್ಟು ರೂ 14999865/- (ರೂ ಒಂದು ಕೋಟಿ ನಲವತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತು ಸಾವಿರ ಎಂಟುನೂರ ಅರವತ್ತೈದು ಮಾತ್ರ) 31 ಜಿಲ್ಲೆಗಳ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಈ ಕೆಳಗಿನ ಷರತ್ತಿನ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಲು ಸೂಚಿಸಿದೆ.

ಷರತ್ತು:-

1. ಸದರಿ ಆದೇಶದಲ್ಲಿ ಬಿಡುಗಡೆ ಗೊಳಿಸಿರುವ ಅನುದಾನವು ಖಜಾನೆ-02ರಲ್ಲಿ ಮರುಹಂಚಿಕೆ ಮಾಡಿದ್ದು ನಿಯಮಾನುಸಾರ ಖಜಾನೆ-02ರಲ್ಲಿ ಡ್ರಾಮಾಡಲು ಸೂಚಿಸಿದೆ.

2. ಬಿಡುಗಡೆ ಮಾಡಿರುವ ಅನುದಾನವನ್ನು ಕೂಡಲೇ ಬಳಸಿಕೊಳ್ಳುವುದು. ತಪ್ಪಿದಲ್ಲಿ ಅನುದಾನವನ್ನು ಲ್ಯಾಪ್ಸ್ ಮಾಡಿರುವುದಕ್ಕೆ ಪೂರ್ಣ ಜವಾಬ್ದಾರಿಯು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರದೇ ಆಗಿರುತ್ತದೆ.

3. ಖರೀದಿಸಿರುವ ಪಠ್ಯಪುಸ್ತಕಗಳನ್ನು ಪುಸ್ತಕ ನಿಧಿ (Book Bank) ರಿಜಿಸ್ಟರ್‌ನಲ್ಲಿ ತಪ್ಪದೆ ನಮೂದಿಸುವುದು ಪಠ್ಯಪುಸ್ತಕಗಳ ಮೇಲೆ ಕಾಲೇಜಿನ ಮೊಹರನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳ ಪುಸ್ತಕ ನಿಧಿ ಯೋಜನೆ ಎಂದು ಮೊಹರನ್ನು ನಮೂದಿಸುವುದು.

4. ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ವರ್ಷದ ಕೊನೆಗೆ ಪಠ್ಯಪುಸ್ತಕಗಳನ್ನು ಸುರಕ್ಷಿತವಾಗಿ ಹಿಂತಿರುಗಿಸುವ ಷರತ್ತಿನ ಮೇರೆಗೆ ವಿತರಿಸುವುದು.

5. ವಿತರಿಸುವ ಪಠ್ಯಪುಸ್ತಕಗಳಿಗಿಂತ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವ ಸಂದರ್ಭಗಳಲ್ಲಿ ಹಿಂದಿನ ವರ್ಷದಲ್ಲಿ (ಎಸ್.ಎಸ್.ಎಲ್.ಸಿ ಅಥವಾ ಪ್ರಥಮ ಪಿಯುಸಿ) ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸುವುದು.

6. ವಿದ್ಯಾರ್ಥಿಗಳಿಗೆ ವಿತರಿಸುವ ಪುಸ್ತಕಗಳ ವಿವರಗಳನ್ನು 2016-2017 ಸಾಲಿನಂತೆ ಇಲಾಖಾ ವೆಬ್‌ಸೈಟ್ PUC online portal ನಲ್ಲಿ ನಮೂದಿಸುವುದು ಕಡ್ಡಾಯವಾಗಿರುತ್ತದೆ.

7. ಪ್ರಾಂಶುಪಾಲರುಗಳಿಗೆ ಬಿಡುಗಡೆಯಾದ ಅನುದಾನವು ಸರ್ಕಾರದ ಮಹತ್ವಾಕಾಂಕ್ಷಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಾಗಿದ್ದು ಯಾವುದೇ ಲೋಪವಾದಲ್ಲಿ ಸಂಬಂಧಿಸಿದ ಪ್ರಾಂಶುಪಾಲರನ್ನು ನೇರ ಹೊಣೆಗಾರನ್ನಾಗಿ ಮಾಡಲಾಗುವುದು.

8. ವೆಚ್ಚಕ್ಕೆ ಸಂಬಂಧಿಸಿದ ವೋಚರ್ಸ್‌ಗಳ ಪರಿಶೀಲನೆ ಮತ್ತು ಪಾವತಿ ಹೊಣೆಗಾರಿಕೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆರವರ ಹೊಣೆಗಾರಿಕೆ ಆಗಿರುತ್ತದೆ.

9. ಅವಶ್ಯಕವಿರುವ ವೆಚ್ಚ ಭರ್ತಿಸಿದ ನಂತರ ಬಳಕೆ ಪ್ರಮಾಣ ಪತ್ರವನ್ನು ಜಂಟಿ ನಿರ್ದೇಶಕರು(ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'. ಇವರಿಗೆ ಸಲ್ಲಿಸತಕ್ಕದ್ದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಎಲ್ಲಾ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ
3. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
5. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.